ಅಗತ್ಯ ಇಲ್ಲ. ರಾಜ್ಯ ಸರ್ಕಾರಗಳಿಗೆ ಆ ಒಂದು ಸ್ವಾತಂತ್ರ್ಯ ಇರಬೇಕು. ಆ ಒಂದು ಅಧಿಕಾರ ಇರಬೇಕೆಂಬುದೇ ಪ್ರಬಲವಾದ ನಮ್ಮ ವಾದ.

ಶ್ರೀ ಬಿ. ಲಕ್ಕಪ್ಪ.—ನೀವು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಿತ್ತೀವೆಂಬ ಮನವರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಮಾಡಿರಲಿಕ್ಕಿಲ್ಲ. ಅದರಿಂದಾಗಿಯೇ ಈ ಸಮಸ್ಯೆ ಉದ್ಭವವಾಗಿರಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೊಂದು ಭರವಸೆಯನ್ನು ತಮಗೆ ಕೊಡುತ್ತಿದ್ದೇನೆ. ನಾವು ಈ ಸೆಕೆಂಡ್ ಚಾನಲ್‌ನ್ನು ರಾಜಕೀಯಕ್ಕಾಗಿ ಉಪಯೋಗಿಸುವುದಿಲ್ಲ. ರಾಷ್ಟ್ರ ವಿರೋಧಿ ಕೆಲಸಕ್ಕೆ ಉಪಯೋಗಿಸುವುದಿಲ್ಲ. ಈಗ ೨ನೇ ಚಾನಲ್ ಬಂದರೂ ಅದರಲ್ಲಿ ಏನು ಬರುತ್ತದೆಯೆಂಬುದು ನಿಮಗೂ ಗೊತ್ತಾಗುತ್ತದೆ. ಅದರಲ್ಲಿ ಏನು ಬರುತ್ತದೆಂದರೆ, ಬರೀ ಕೇಂದ್ರ ಸರ್ಕಾರದ ಕಾಂಗ್ರೆಸ್‌ನ ಪ್ರಚಾರ ಬರುತ್ತದೆ. ಪುನಃ ಪುನಃ ರಾಜೀವಗಾಂಧಿಯವರ ದರ್ಶನ ಆಗುತ್ತದೆಯೇ ಹೊರತು ಬೇರೆ ಏನೂ ಕಾರ್ಯಕ್ರಮ ಬರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಪಶ್ಚಿಮ ಬಂಗಾಳದಲ್ಲಿ ಶ್ರೀಮಾನ್ ಜ್ಯೋತಿ ಬಸು ಅವರೂ ಕೂಡ ಸೆಕೆಂಡ್ ಚಾನಲ್ ಕೊಡಬೇಕೆಂದು ಹೇಳುತ್ತಿದ್ದಾರೆ. ಆಯಾ ಪ್ರಾಂತ್ಯ ಸರ್ಕಾರಗಳ ಪ್ರಚಾರಕ್ಕೆ ಇದು ಇರಬೇಕೆಂದು ಶ್ರೀಮಾನ್ ಜ್ಯೋತಿ ಬಸು ಹಾಗೂ ನಾನ್ ಕಾಂಗ್ರೆಸ್ ಸರ್ಕಾರಗಳ ಮುಖ್ಯ ಮಂತ್ರಿಗಳು ಕೂಡ ಇದನ್ನೇ ಹೇಳುತ್ತಿದ್ದಾರೆ. ಈಗ ಟಿ.ವಿ. ಪೂರ್ತಿಯಾಗಿ ಕೇಂದ್ರ ಸರ್ಕಾರವನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಅನೇಕ ಸಾರಿ ರಾಜ್ಯ ಸರ್ಕಾರಗಳನ್ನು ಅವಹೇಳನ ಮಾಡತಕ್ಕ ಸಂಸ್ಥೆಯಾಗಿದೆ. ಇದನ್ನು ಪ್ರತಿಭಟಿಸಿದ್ದಾರೆ. ಸೆಕೆಂಡ್ ಚಾನಲ್‌ನ್ನು ಪೂರ್ತಿಯಾಗಿ ನಮಗೆ ಕೊಡಬೇಕು. ಅದೂ ಕೂಡ ರಾಜ್ಯ ಸರ್ಕಾರಗಳ ಸ್ವಾಯತ್ತತೆಯಲ್ಲಿರಬೇಕೆಂದು ಕೇಳಿದ್ದಾರೆ. ಇದನ್ನು ಶ್ರೀಮಾನ್ ಜ್ಯೋತಿ ಬಸು ಹಾಗೂ ಇತರೆ ನಾನ್ ಕಾಂಗ್ರೆಸ್ ಗೌರ್ನಮೆಂಟ್‌ನ ಮುಖ್ಯಮಂತ್ರಿಗಳೂ ಕೂಡ ಹೇಳಿರತಕ್ಕಂತಹದ್ದು. ಆದೇರೀತಿಯಲ್ಲಿ ತಾವೂ ಕೂಡ ಕೇಂದ್ರವನ್ನು ಒತ್ತಾಯಿಸಬೇಕು. ಸೆಕೆಂಡ್ ಚಾನಲ್‌ನ್ನು ಕೊಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅಪಮಾನವನ್ನು ಮಾಡಬೇಕೆಂದು ಹೇಳುತ್ತಿಲ್ಲ. ರಾಜ್ಯ ಸರ್ಕಾರಗಳ ಮನೋಭಾವನ್ನು ಪ್ರತಿವಾದಿಸಿ, ಎರಡನೆಯ ಚಾನಲ್‌ನ್ನು ಕೊಡಬೇಕೆಂದು ಕೇಳಿ. ತಾವು ಅದಕ್ಕೆ ಒಪ್ಪಿ ಕೇಂದ್ರ ಸರ್ಕಾರವನ್ನು ಬಲಾತ್ಕಾರ ಮಾಡಿ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆಯಿರಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರವನ್ನು ಬಲಾತ್ಕಾರ ಮಾಡತಕ್ಕಂಥ ಉಪಾಯವನ್ನು ಮಾನ್ಯ ಸದಸ್ಯರು ಅವರೇ ಹೇಳಬೇಕು.

ನಿಯಮ ೩೩ಳಿರ ಮೇರೆಗೆ

೧. ಶಿವಮೊಗ್ಗ ಜಿಲ್ಲೆಯಲ್ಲಿ ಏತ ನೀರಾವರಿಗೋಸ್ಕರ ರೈತರಿಂದ ಹಣ ವಸೂಲಿ ಮಾಡಲು ನೋಟೀಸ್ ಕೊಟ್ಟಿರುವುದು.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ ಶಿವಮೊಗ್ಗ ಜಿಲ್ಲೆಯಲ್ಲಿ ಏತ ನೀರಾವರಿಗೋಸ್ಕರ ಕಳೆದ ಸಾಲಿನ ಅಂದಾಜು ಪಟ್ಟಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಆ ಬಗ್ಗೆ ರೈತರುಗಳಿಗೆ ನೋಟೀಸು ಕೊಡಲಾಗಿದೆ. ಏತ ನೀರಾವರಿ ಅಂದಾಜಿನ ವೆಚ್ಚದ ಪೈಕಿ ಶೇ. ೧೦ ರಷ್ಟನ್ನು ಸರಕಾರ ಕೊಡುವುದಾಗಿಯೂ, ಶೇ. ೧೫ ರಷ್ಟನ್ನು ಫಲಾನುಭವಿಗಳು ಎಂದರೆ ರೈತರು ಕೊಡಬೇಕೆಂದು ಉಳಿದ ಶೇ. ೭೫ ಭಾಗವನ್ನು ನಬಾರ್ಡ್ ಅಥವಾ ಬ್ಯಾಂಕುಗಳಿಂದ ಪಡೆದುಕೊಳ್ಳುವುದಾಗಿಯೂ ತೀರ್ಮಾನ ಕೈಗೊಂಡು ಒಬ್ಬೊಬ್ಬ ರೈತರು ಆಯಾ ಕಾಮಗಾರಿಯ ಅಂದಾಜು ವೆಚ್ಚದ ಪ್ರಕಾರ ಅವರ ಭಾಗವಾದ ಶೇ. ೧೫ರ ಪಾಲಿನಲ್ಲಿ ಮಂಗಡವಾಗಿ ಎಕರೆಗೆ ೯೦೦ ರೂಪಾಯಿಗಳಿಂದ ೧೫೦೦ ರೂಪಾಯಿಗಳವರೆಗೆ ೧೫ ದಿನಗಳೊಳಗಾಗಿ ಕಟ್ಟಬೇಕೆಂದು ಆರೀತಿ ಕಟ್ಟದೆ ಹೋದ ಪಕ್ಷದಲ್ಲಿ ಸದರಿ ಕಾಮಗಾರಿಯನ್ನು ಬೇರೆಡೆಗೆ ಬದಲಾಯಿಸಲಾಗುತ್ತದೆಂದು ನೋಟೀಸು ಕೊಡಲಾಗಿದೆ. ಇದಲ್ಲದೆ, ಬ್ಯಾಂಕಿನ ಸಾಲವಾದ ಶೇ. ೭೫ ಭಾಗವನ್ನು ಅಸಲಿನ ಜೊತೆಗೆ ಬಡ್ಡಿ ಮತ್ತು ನೀರಾವರಿ ದರಗಳನ್ನು ಕಾಲಕಾಲಕ್ಕೆ ರೈತರು ಕಟ್ಟಿಕೊಂಡು ಹೋಗಬೇಕೆಂದು ತಿಳಿಸಲಾಗಿದೆ. ಇದುವರೆಗೆ ಸರಕಾರವೇ ಎಲ್ಲಾ ವೆಚ್ಚವನ್ನೂ ವಹಿಸಿಕೊಂಡು ಏತ ನೀರಾವರಿ ಕಾಮಗಾರಿಗಳನ್ನು ಮಾಡಿಸಿಕೊಡುತ್ತಿದ್ದು, ರೈತರಿಗೆ ಬಹಳ

ಉಪಯೋಕ್ತವಾಗಿದ್ದಿತು. ಆದ್ದರಿಂದ ಈ ಹಿಂದಿನಂತೆಯೇ ಈಗಲೂ ಕಾವಂಗಾರಿಗಳನ್ನು ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಸಚಿವರು ಮೇಲ್ಮನೆಯಲ್ಲಿರುತ್ತಾರೆ. ಮಾನ್ಯ ಸಚಿವರಿಗೆ ವಿಷಯವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

(2) ರೈತರ ಜಮೀನುಗಳಲ್ಲಿ ಕಂಟೂರ್ ಬಂಡ್‌ಗಳನ್ನು ನಿರ್ಮಾಣ ಮಾಡಲು ರೈತರಿಂದಲೇ ಹಣ ವಸೂಲಿ ಮಾಡುತ್ತಿರುವುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಸರ್ಕಾರವು ರಾಜ್ಯಾದ್ಯಂತ ಭೂ ಸಂರಕ್ಷಣಾ ಇಲಾಖೆಯಿಂದ ರೈತರಿಗೆ ಜಮೀನುಗಳಲ್ಲಿ 'ಕಂಟೂರ್ ಬಂಡು'ಗಳನ್ನು ನಿರ್ಮಾಣ ಮಾಡಿರುವುದು ಸರಿಯಷ್ಟೆ. ಇವುಗಳ ನಿರ್ಮಾಣಕ್ಕೆ ಹಣವನ್ನು ಇಲಾಖೆಯ ಯೋಜನೆಯ ಅಡಿಯಲ್ಲಿ ಹಾಗೂ ಬರಗಾಲದ ಪರಿಹಾರ ಕಾವಂಗಾರಿಗಳ ಅಡಿಯಲ್ಲೂ ಮಾಡಲಾಗಿದೆ. ಇತ್ತೀಚೆಗೆ ಈ ಹಣವನ್ನು ರೈತರಿಂದ ಭೂ ತೆರಿಗೆ ರೂಪದಲ್ಲಿ ವಸೂಲು ಮಾಡಲು ಆದೇಶಿಸಿದೆ. ಆದರೆ ಸತತವಾಗಿ ಬರಗಾಲವನ್ನು ಅನುಭವಿಸಿದ ರೈತರಿಂದ ಕೂಡಲೇ ಈರೀತಿ ವಸೂಲು ಮಾಡುವುದು ಸರಿಯೇ ? ಜೊತೆಗೆ ಬರಗಾಲದ ಹಣವನ್ನು ಖರ್ಚು ಮಾಡಿದಂತ ಕಡೆ ವಸೂಲಾತಿಯ ಪ್ರಶ್ನೆ ಉದ್ಭವಿಸಲಾರದು. ಪ್ರಯುಕ್ತ ಸರ್ಕಾರ ಹಸಿರು ಕ್ರಾಂತಿಯನ್ನು ಯಶಸ್ವಿಗೊಳಿಸಲು ಮಾಡಿರುವ ಯತ್ನದಲ್ಲಿ ಇದೂ ಒಂದೆಂದು ಪರಿಗಣಿಸಿ ವಸೂಲಾತಿಯನ್ನು ಮನ್ನಾ ಮಾಡಲು ಕೋರುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು) —ಮಾನ್ಯ ಅಧ್ಯಕ್ಷರೇ ಈಗಾಗಲೇ ಸಣ್ಣ ಅತಿ ಸಣ್ಣ ರೈತರಿಂದ ಯಾವವಿಧವಾದ ಹಣವನ್ನು ವಸೂಲು ಮಾಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ಈಗಾಗಲೇ ಆದೇಶವನ್ನು ಕೊಟ್ಟಿದೆ. ಆದರೆ ದೊಡ್ಡ ರೈತರಿಂದ ೧೯೮೫ ಮಾರ್ಚ್ ಆಕ್ಟೋಬರ್‌ಗೆ ಏನು ಹಣ ಬರಬೇಕಾಗಿತ್ತೋ ಅದರ ಬಗ್ಗೆ ೫೦ ರಷ್ಟು ಹಣವನ್ನು ಈಗಾಗಲೇ ಸರ್ಕಾರ ಮನ್ನಾ ಮಾಡಿ ಉಳಿದ ೫೦ ರಷ್ಟು ಹಣವನ್ನು ಕಂತು ಮೂಲಕ ವಸೂಲು ಮಾಡಲು ಮೂರು ವರ್ಷಗಳ ಕಾಲಾವಕಾಶವನ್ನು ಕೊಟ್ಟಿದೆ. ಮತ್ತೆ ಒಂದು ವರ್ಷ ಕಾಲ ಅವಧಿಯನ್ನೂ ಕೂಡ ಕೊಡಬೇಕೆಂದು ಮಾಡಿದೆ. ಬರಗಾಲದ ಕಾವಂಗಾರಿಗಳಿಂದ ದೊಡ್ಡ ರೈತರಿಗೆ ಬೆನಿಫಿಟ್ ಆಗುತ್ತಿದೆ, ಸಣ್ಣ ರೈತರಿಗೆ ಅನುಕೂಲವಾಗಬೇಕೆಂದರೆ ಅವರಿಂದ ಏನು ಹಣವನ್ನು ವಸೂಲು ಮಾಡುತ್ತಿರುತ್ತಾರೆ ಅದರಿಂದ ರಿಯಾಯತಿಯನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿರುತ್ತಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

(3) ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮೀಣ ಶಿಕ್ಷಣ ಸಂಸ್ಥೆಯಲ್ಲಿ ಪರಿಶಿಷ್ಟ ವರ್ಗದವರನ್ನು ಆಯ್ಕೆ ಮಾಡದಿರುವುದು.

ಶ್ರೀ ಯು. ಭೂಪತಿ.—ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮದಲ್ಲಿರುವ ತೋರಣಗಲ್ಲು ಗ್ರಾಮೀಣ ಶಿಕ್ಷಣ ಸಂಸ್ಥೆಯಿಂದ ನಡೆಯುತ್ತಿರುವ 'ಶ್ರೀ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ಆಯ್ಕೆ ಮಾಡಬೇಕಾದ ಶಿಕ್ಷಕರ ಹುದ್ದೆಗಳಿಗೆ ಅವರನ್ನು ನೇಮಕ ಮಾಡದೆ ಬೇರೆ ವರ್ಗದ ಪಂಗಡದ ಜನರನ್ನು ಆಯ್ಕೆ ಮಾಡಿದ್ದಾರೆ. ಈ ರೀತಿ ಶೇಕಡ ೧೮ರ ನೇಮಕಾತಿಗಾಗಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗೀ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಕಾನೂನುಬಾಹಿರವಾಗಿ, ಸಂವಿಧಾನಾತ್ಮಕ ಹಕ್ಕುಗಳನ್ನು ಮೀರಿದು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಅನ್ಯಾಯ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಈ ನಿಟ್ಟಿನಲ್ಲಿ ಸದರಿ ಶಾಲೆಯ ಆಡಳಿತ ಮಂಡಲಿಯ ಮೇಲೆ ಹಾಗೂ ಬೇರೆ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ತಿಳಿಯಬಯಸಿ ಈ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಮಂತ್ರಿಗಳು ಆ ಸದನದಲ್ಲಿದ್ದಾರೆ, ತಮಗೆ ಉತ್ತರ ತರಿಸಿಕೊಡುತ್ತೇನೆ.